## ಪರಿಚಯ

ಪಬ್ಲಿಕ್ ಅಫೇರ್ಸ್ ಸೆಂಟರ್ (ಪಿಎಸಿ) ಭಾರತೀಯ ಸನ್ನಿವೇಶದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿಗಳು) ಗುರಿಯಾಗಿರಿಸಿಕೊಂಡ ಸಕ್ರಿಯ ಸಂಶೋಧನೆಗಳಲ್ಲಿ ತೊಡಗಿಸಕೊಂಡಿದೆ. ಪಿಎಸಿಯೂ, ಭಾರತದಲ್ಲಿ ಆಡಳಿತದ ಗುಣಮಟ್ಟವನ್ನು ವೃದ್ಧಿಸುವ ಉದ್ದೇಶದೊಂದಿಗೆ 1994ರಲ್ಲಿ ಸ್ಥಾಪನೆಗೊಂಡ ಲಾಭರಹಿತ ಯೋಚನಾ/ ವಿಚಾರವೇದಿಕೆ ಸಂಸ್ಥೆಯಾಗಿದೆ.

ಪಬ್ಲಿಕ್ ಅಫೇರ್ಸ್ ಇಂಡೆಕ್ಸ್ (ಪಿಎಐ) ಎಂದರೆ, ಭಾರತದ ರಾಜ್ಯಗಳಲ್ಲಿರುವ ಆಡಳಿತದ ಗುಣಮಟ್ಟ ಹಾಗೂ ಪರ್ಯಾಪ್ತತೆಗಳ ವಾರ್ಷಿಕ ಅಂದಾಜಿಸುವಿಕೆಯಾಗಿದೆ. ಸಂಯೋಜಿತ ಸೂಚ್ಯಂಕದ ಆಧಾರದ ಮೇಲೆ ರಾಜ್ಯಗಳಿಗೆ ಅವುಗಳ ಆಡಳಿತ ಕಾರ್ಯದಕ್ಷತೆಯ ಪ್ರಕಾರ ಶ್ರೇಯಾಂಕವನ್ನು ನೀಡಲಾಗುತ್ತದೆ. ಪಿಎಐ 2021, ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಲಭ್ಯವಿರುವಂತಹ ಕೇವಲ ಕೇಂದ್ರ ಸರ್ಕಾರದ ದತ್ತಾಂಶವನ್ನು ಬಳಸಿಕೊಂಡು ಮಾಡುವಂತಹ ಒಂದು ಪಕ್ಷೇತರ, ಸ್ವತಂತ್ರ ಹಾಗೂ ಸಾಕ್ಷ್ಯಾಧಾರಿತ ಅಧ್ಯಯನವಾಗಿದೆ. ಪಬ್ಲಿಕ್ ಅಫೇರ್ಸ್ ಇಂಡೆಕ್ಸ್‌ನ ಒಂದು ವೈಶಿಷ್ಟ್ಯತೆ ಏನೆಂದರೆ, ಸೂಚ್ಯಂಕ ಗಣನೆಯಲ್ಲಿರುವ ವ್ಯಕ್ತಿನಿಷ್ಠ ಪಕ್ಷಪಾತಗಳನ್ನು ನಿರ್ಮೂಲನೆಗೊಳಿಸುತ್ತದೆ, ಅಂದರೆ ಈ ಮೂಲಕ ಲಭಿಸುವಂತಹ ಫಲಿತಾಂಶಗಳು ವೈಜ್ಞಾನಿಕವಾಗಿ ಅತ್ಯಂತ ಕಠಿಣ ವಿಧಾನವಾದ ಪ್ರಧಾನ ಅಂಶ ವಿಶ್ಲೇಷಣೆಯನ್ನು (Principal Component Analysis (PCA)) ಬಳಸಿ ಸೃಷ್ಟಿಸುವ ಕಂಪ್ಯೂಟರ್ ಸೃಷ್ಟಿತ ಫಲಿತಾಂಶಗಳಾಗಿರುತ್ತವೆ.

## ಪಬ್ಲಿಕ್ ಅಫೇರ್ಸ್ ಇಂಡೆಕ್ಸ್ 2021 (ಪಿಎಐ 2021)

ಪಿಎಐ 2021, ನ್ಯಾಯೋಚಿತ, ಬೆಳವಣಿಗೆ ಹಾಗೂ ಸುಸ್ಥಿರತೆಯ ಮೂರು ಸ್ತಂಭಗಳನ್ನು ಒಳಗೊಂಡ, ಐದು ವಿಷಯಗಳು, 14 ಎಸ್‌ಡಿಜಿಗಳು ಹಾಗೂ 43 ಸೂಚ್ಯಂಕಗಳಿಂದ ವ್ಯಾಖ್ಯಾನಿತಗೊಂಡಿರುವ ಸುಸ್ಥಿರ ಅಭಿವೃದ್ಧಿಯ ಸನ್ನಿವೇಶದ ಹಿನ್ನೆಲೆಯಲ್ಲಿ ಆಡಳಿತದ ಕಾರ್ಯದಕ್ಷತೆಯನ್ನು ಅವಲೋಕಿಸುತ್ತದೆ. ಈ ಸ್ತಂಭವಾರು ಶ್ರೇಯಾಂಕಗಳು ಹಾಗೂ ವಿಶ್ಲೇಷಣೆಯಲ್ಲದೆ, ಪಿಎಐ 2021, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂಜಿಎನ್‌ಆರ್‌ಇಜಿಎಸ್), ರಾಷ್ಟ್ರೀಯ ಆರೋಗ್ಯ ಮಿಷನ್ (ಎನ್‌ಎಂಹೆಚ್), ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳು (ಐಸಿಡಿಎಸ್), ಸಮಗ್ರ ಶಿಕ್ಷಾ ಅಭಿಯಾನ (ಎಸ್‌ಎಂಎಸ್‌ಎ) ಹಾಗೂ ಮಧ್ಯಾಹ್ನದ ಬಿಸಿಯೂಟ (ಎಂಡಿಎಂಎಸ್) ಈ ಐದು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳ ಅನುಷ್ಠಾನದ ಪರಿಣಾಮಕಾರಿತ್ವ ಹಾಗೂ ಅಂದಾಜಿಸುವಿಕೆಯ ವೈಶಿಷ್ಟ್ಯತೆಗಳನ್ನು ಒಳಗೊಂಡಿದೆ.

ಪಿಎಐ 2021ರ ಮತ್ತೊಂದು ಮುಖ್ಯಾಂಶವೇನೆಂದರೆ ಕೋವಿಡ್–19 ಪ್ರತಿಕ್ರಿಯಾ ಸೂಚಕ (COVID-19 Response Index) – ಸಾಂಕ್ರಾಮಿಕಕ್ಕೆ ರಾಜ್ಯಗಳ ಆಡಳಿತ ಪ್ರತಿಕ್ರಿಯೆಯ ವಿಶ್ಲೇಷಣೆ ಹಾಗೂ ಸಾಂಕ್ರಾಮಿಕದ ಪರಿಣಾಮವನ್ನು ಕಡಿಮೆಗೊಳಿಸುವಲ್ಲಿ ಸಾಧಿಸಿರುವ ಯಶಸ್ಸಿನ ಪ್ರಮಾಣವನ್ನು ಒಳಗೊಂಡಿದೆ.

ಪಿಎಐ 2021ನ್ನು ಅಕ್ಟೋಬರ್ 29, 2021, ಶುಕ್ರವಾರದಂದು ಬೆಂಗಳೂರಿನಲ್ಲಿ ಚಾಲನೆ ನೀಡಲಾಯಿತು. ಇದು ಭಾರತದ ರಾಜ್ಯಗಳ ಆಡಳಿತ ಕಾರ್ಯಪ್ರದರ್ಶನದ ಕುರಿತು ಶ್ರೇಯಾಂಕಗಳನ್ನು ನೀಡುವ 6ನೇ ವರ್ಷವಾಗಿದೆ. ಪಿಎಐ 2021ರ ಫಲಿತಾಂಶಗಳು ಈ ಕೆಳಗಿನಂತಿವೆ:

ಒಟ್ಟಾರೆ ಪಿಎಐ 2021 ಸೂಚ್ಯಂಕ – ಅಂಕಗಳು ಹಾಗೂ ಶ್ರೇಯಾಂಕಗಳು

| ದೊಡ್ಡ ರಾಜ್ಯಗಳು | ಶ್ರೇಯಾಂಕ | ಪಿಎಐ 2021 ಸೂಚ್ಯಂಕ ಅಂಕ |
|---|---|---|
| ಕೇರಳ | 1 | 1.618 |
| ತಮಿಳು ನಾಡು | 2 | 0.897 |

| | | |
|---|---|---|
| ತೆಲಂಗಾಣ | 3 | 0.891 |
| ಛತ್ತೀಸ್‌ಘಡ | 4 | 0.872 |
| ಗುಜರಾತ್ | 5 | 0.782 |
| ಪಂಜಾಬ್ | 6 | 0.643 |
| ಕರ್ನಾಟಕ | 7 | 0.121 |
| ಆಂಧ್ರ ಪ್ರದೇಶ | 8 | 0.077 |
| ಜಾರ್ಖಂಡ್ | 9 | –0.071 |
| ಮಧ್ಯ ಪ್ರದೇಶ | 10 | –0.113 |
| ರಾಜಸ್ತಾನ್ | 11 | –0.243 |
| ಮಹಾರಾಷ್ಟ್ರ | 12 | –0.360 |
| ಹರ್ಯಾಣ | 13 | –0.431 |
| ಅಸ್ಸಾಂ | 14 | –0.459 |
| ಪಶ್ಚಿಮ ಬಂಗಾಳ | 15 | –0.553 |
| ಒರಿಸ್ಸಾ | 16 | –0.910 |
| ಬಿಹಾರ | 17 | –1.343 |
| ಉತ್ತರ ಪ್ರದೇಶ | 18 | –1.418 |

| **ಸಣ್ಣ ರಾಜ್ಯಗಳು** | **ಶ್ರೇಯಾಂಕ** | **ಪಿಎಐ 2021 ಸೂಚ್ಯಂಕ** |
|---|---|---|
| ಸಿಕ್ಕಿಂ | 1 | 0.907 |
| ಗೋವಾ | 2 | 0.748 |
| ಮಿಜೊರಾಂ | 3 | 0.659 |
| ಹಿಮಾಚಲ್ ಪ್ರದೇಶ | 4 | 0.318 |
| ತ್ರಿಪುರಾ | 5 | –0.009 |
| ಮೇಘಾಲಯ | 6 | –0.146 |
| ಅರುಣಾಚಲ ಪ್ರದೇಶ | 7 | –0.258 |
| ನಾಗಾಲ್ಯಾಂಡ್ | 8 | –0.317 |
| ದೆಹಲಿ | 9 | –0.476 |
| ಉತ್ತರಾಖಾಂಡ್ | 10 | –0.643 |
| ಮಣಿಪುರ್ | 11 | –0.783 |

| **ಕೇಂದ್ರಾಡಳಿತ ಪ್ರದೇಶ** | **ಶ್ರೇಯಾಂಕ** | **ಪಿಎಐ 2021 ಸೂಚ್ಯಂಕ ಅಂಕ** |
|---|---|---|
| ಪುದುಚೇರಿ | 1 | 1.345 |
| ದಾದ್ರಾ & ನಾಗರ್ ಹವೇಲಿ ಮತ್ತು ದಮನ ಹಾಗೂ ಡಿಯು | 5 | –0.445 |
| ಲಕ್ಷ್ಯದ್ವೀಪ | 4 | –0.302 |
| ಜಮ್ಮು ಮತ್ತು ಕಾಶ್ಮೀರ | 2 | 0.396 |
| ಛಂಡೀಘಡ | 3 | –0.298 |
| ಅಂಡಮಾನ್ ಮತ್ತು ನಿಕೋಬಾರ್ ದ್ವೀಪ | 6 | –0.696 |

**ವರದಿಯ ಮುಖ್ಯಾಂಶಗಳು:**

- ಪಬ್ಲಿಕ್ ಅಫೇರ್ಸ್ ಸೂಚಕ ಸರಣಿ (Public Affairs Index Series), ಕೇವಲ ಕೇಂದ್ರ ಸರ್ಕಾರದ ದತ್ತಾಂಶ ಮೂಲಗಳನ್ನು ಮಾತ್ರ ಬಳಸಿಕೊಂಡು ನಡೆಸುವ ರಾಜ್ಯಗಳ ಕಾರ್ಯದಕ್ಷತೆಯ ಸಾಕ್ಷ್ಯಾಧಾರಿತ ಅಂದಾಜಿಸುವಿಕೆಯಾಗಿದೆ. ವಿವಿಧ ವರ್ಗಗಳಡಿ ಗೆದ್ದಿರುವ ರಾಜ್ಯಗಳು ಈ ಕೆಳಗಿನಂತಿವೆ:
    - ದೊಡ್ಡ ರಾಜ್ಯಗಳು (ಎಲ್ಎಸ್) – ವಿಜೇತರು – ಕೇರಳ, ತಮಿಳುನಾಡು ಮತ್ತು ತೆಲಂಗಾಣ
    - ಸಣ್ಣ ರಾಜ್ಯಗಳು (ಎಸ್ಎಸ್) – ವಿಜೇತರು – ಸಿಕ್ಕಿಂ, ಗೋವಾ ಮತ್ತು ಮಿಜೊರಾಂ
    - ಕೇಂದ್ರಾಡಳಿತ ಪ್ರದೇಶಗಳು (ಯುಟಿಗಳು) – ವಿಜೇತರು, ಪುದುಚೇರಿ, ಜಮ್ಮು ಮತ್ತು ಕಾಶ್ಮೀರ ಹಾಗೂ ಚಂಡೀಘಡ
- ದೊಡ್ಡ ರಾಜ್ಯಗಳ ವರ್ಗದಡಿ ಪಿಎಐ 2021ರ ಒಟ್ಟಾರೆ ಶ್ರೇಯಾಂಕಗಳಲ್ಲಿ ಕೇರಳ ಮೊದಲ ಸ್ಥಾನದಲ್ಲಿ ಮುಂದುವರೆದಿದೆ. ಅದೇ ರೀತಿ ತಮಿಳು ನಾಡು 2ನೇ ಸ್ಥಾನವನ್ನು ಉಳಿಸಿಕೊಂಡಿದೆ. ಮೂರನೇ ಸ್ಥಾನದಲ್ಲಿ ಆಂಧ್ರಪ್ರದೇಶವನ್ನು ಹಿಂದಿಕ್ಕಿ ತೆಲಾಂಗಣ ಮೂರನೆ ಸ್ಥಾನವನ್ನು ತುಂಬಿದೆ. ತೆಲಂಗಾಣ, ಜಾರ್ಖಂಡ್ ಹಾಗೂ ಛತ್ತೀಸ್‌ಘಡ ರಾಜ್ಯಗಳು ಅವುಗಳ ಮೂಲ ರಾಜ್ಯಗಳ ಹೋಲಿಕೆಯಲ್ಲಿ ಉತ್ತಮ ಕಾರ್ಯದಕ್ಷತೆಯನ್ನು ನೀಡಿರುವ ಅಂಶ ಕುತೂಹಲ ತರಿಸಿದೆ.
- ತೆಲಂಗಾಣ, ಛತ್ತೀಸ್‌ಘಡ, ಜಾರ್ಖಂಡ್ ಹಾಗೂ ಗುಜರಾತ್ ರಾಜ್ಯಗಳು ಒಟ್ಟಾರೆ ಸೂಚ್ಯಂಕದಲ್ಲಿ ಉತ್ತಮ ಕಾರ್ಯಪ್ರದರ್ಶನವನ್ನು ನೀಡಿದ್ದರೆ, ಮಹಾರಾಷ್ಟ್ರ, ಅಸ್ಸಾಂ, ಕರ್ನಾಟಕ ಹಾಗೂ ಆಂಧ್ರ ಪ್ರದೇಶ ರಾಜ್ಯಗಳು ಹಿಂದಿನ ವರ್ಷದ ಹೋಲಿಕೆಯಲ್ಲಿ ಶ್ರೇಯಾಂಕದಲ್ಲಿ ಕೆಳಕ್ಕೆ ಜಾರಿವೆ.
- ಉತ್ತಮ ಹಾಗೂ ಕೆಳಮಟ್ಟದ ಸ್ಥಾನಗಳಲ್ಲದೆ ಕಳೆದ ವರ್ಷ 3ನೇ ಸ್ಥಾನದಲ್ಲಿದ್ದಂತಹ ಆಂಧ್ರ ಪ್ರದೇಶ ಪಿಎಐ 2021ರಲ್ಲಿ ನ್ಯಾಯೋಚಿತ ಹಾಗೂ ಬೆಳವಣಿಗೆಯ ಸ್ತಂಭದಲ್ಲಿ ಅನುಭವಿಸಿರುವ ತೀವ್ರ ಇಳಿಕೆಯ ಕಾರಣದಿಂದಾಗಿ 8ನೇ ಶ್ರೇಯಾಂಕವನ್ನು ಪಡೆದುಕೊಂಡಿದೆ. ಅದೇ ರೀತಿ ಕರ್ನಾಟಕವೂ ಸಹ ನಾಲ್ಕನೇ ಸ್ಥಾನದಿಂದ ಮೂರು ಸ್ಥಾನಗಳು ಕೆಳಗೆ ಜಾರಿದೆ, ಅಂದರೆ 7ನೇ ಶ್ರೇಯಾಂಕವನ್ನು ಪಡೆದುಕೊಂಡಿದೆ (ನ್ಯಾಯೋಚಿತ ಸ್ತಂಭದಲ್ಲಿ 12 ರಿಂದ 16ನೇ ಸ್ಥಾನಕ್ಕೆ ಜಾರುವ ಮೂಲಕ) ಆದರೂ ಸಹ ಅಂಕಗಳು ಸಕಾರಾತ್ಮಕವಾಗಿವೆ, ಆ ಮೂಲಕ ತನ್ನ ಅಭಿವೃದ್ಧಿ ಮೇಲೇರುವಿಕೆಯನ್ನು ಮರುಗಳಿಸುವ ಸಾಧ್ಯತೆಗಳನ್ನು ಉಳಿಸಿಕೊಂಡಿದೆ. ಕಳೆದ ವರ್ಷ 12ನೇ ಶ್ರೇಯಾಂಕದಲ್ಲಿದ್ದಂತಹ ಪಶ್ಚಿಮ ಬಂಗಾಳ ಈ ವರ್ಷ 15ನೇ ಶ್ರೇಯಾಂಕದಲ್ಲಿದ್ದು, ಮಹಾರಾಷ್ಟ್ರ ಕಳೆದ ವರ್ಷ 7ನೇ ಶ್ರೇಯಾಂಕದಲ್ಲಿದ್ದು, ಈ ವರ್ಷ 12ನೇ ಶ್ರೇಯಾಂಕವನ್ನು ಪಡೆದಿದೆ (ನ್ಯಾಯೋಚಿತ ಸ್ತಂಭದಲ್ಲಿ 6ನೇ ಸ್ಥಾನದಿಂದ 15ನೇ ಸ್ಥಾನಕ್ಕೆ ಇಳಿದಿದೆ), ಇದು ರಾಜ್ಯ ಸಾಂಕ್ರಾಮಿಕದಿಂದ ಚೇತರಿಸಿಕೊಳ್ಳಲು ಹೋರಾಡುತ್ತಿರುವ ಸ್ಪಷ್ಟ ಸೂಚಕವಾಗಿದೆ. ಇಲ್ಲಿ ಗಮನಿಸಬೇಕಾಗಿರುವ ಒಂದು ಆಶ್ಚರ್ಯಕರ ವಿಷಯವೆಂದರೆ ಜಾರ್ಖಂಡ್ ರಾಜ್ಯ 15ನೇ ಶ್ರೇಯಾಂಕದಿಂದ 9ನೇ ಶ್ರೇಯಾಂಕಕ್ಕೆ ಏರಿದೆ, ಬೆಳವಣಿಗೆ ಸ್ತಂಭದಲ್ಲಿ (ಅಂಶ) 3ನೇ ಶ್ರೇಯಾಂಕವನ್ನು ಪಡೆದುಕೊಂಡಿದೆ.
- ರಾಜ್ಯಗಳು ಕೋವಿಡ್ ಸಾಂಕ್ರಾಮಿಕದ ಮಹತ್ತರವಾದ ಪರಿಣಾಮವನ್ನು ಎದುರಿಸಿವೆ. ಆದರೆ ಒರಿಸ್ಸಾ ಹಾಗೂ ನಾಗಾಲ್ಯಾಂಡ್ ರಾಜ್ಯಗಳು ಒಟ್ಟಾರೆ ಶ್ರೇಯಾಂಕ ಪಟ್ಟಿಯಲ್ಲಿ ಕೊನೆಯ ಸ್ಥಾನಗಳಲ್ಲಿದ್ದರೂ ಸಹ ಪ್ರಮುಖ ಅಭಿವೃದ್ಧಿ ಸೂಚ್ಯಂಕಗಳಲ್ಲಿ ವಾರ್ಷಿಕ ಪ್ರಗತಿಯ ವಿಷಯದಲ್ಲಿ ಉತ್ತಮವಾದ ಕಾರ್ಯದಕ್ಷತೆ ಪ್ರದರ್ಶಿಸಿರುವುದನ್ನು ಡೆಲ್ಟಾ ವಿಶ್ಲೇಷಣೆ ತೋರಿಸಿದೆ.
- ಯೋಜನಾ ಸೂಚಕ ಹಾಗೂ ಕೋವಿಡ್–19 ಸೂಚಕ ಕಾರ್ಯದಕ್ಷತೆಗಳು ಒಟ್ಟಾರೆ ಆಡಳಿತ ಮಾದರಿಯಲ್ಲಿ ರಾಜ್ಯಗಳ ಕಾರ್ಯದಕ್ಷತೆಗೆ ಪೂರಕವಾಗಿದೆ. ಅತೀ ಕಡಿಮೆ ತಲಾ ಒಟ್ಟು ದೇಶೀ ಉತ್ಪನ್ನವಿರುವಂತಹ ರಾಜ್ಯಗಳಲ್ಲಿ ಗಮನಿಸಲಾಗಿರುವ ಕೋವಿಡ್–19 ಪ್ರತಿಕ್ರಿಯಾ ಸೂಚಕದ ಪ್ರವೃತ್ತಿಯೂ, ಕಳಪೆ ಕಾರ್ಯದಕ್ಷತೆಯನ್ನು ತೋರಿಸಿವೆ ಮತ್ತು ಶ್ರೇಯಾಂಕ ಪಟ್ಟಿಯಲ್ಲಿ ಕೆಳ ಹಂತದ ಸ್ಥಾನಗಳಲ್ಲಿ ಗುರುತಿಸಿಕೊಂಡಿವೆ. ಆ ರಾಜ್ಯಗಳು ಬಿಹಾರ, ಉತ್ತರಪ್ರದೇಶ ಮತ್ತು ಮಧ್ಯಪ್ರದೇಶ. ಈ ರಾಜ್ಯಗಳಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಸಾಂಕ್ರಾಮಿಕದ ಕಂಟೇನ್‌ಮೆಂಟ್ ಪ್ರತಿಕ್ರಿಯೆಯ ಅಂಶದಲ್ಲಿ ಉತ್ತಮ ಕಾರ್ಯದಕ್ಷತೆಯನ್ನು ತೋರಿಸಿವೆ. ಇದು ಕೋವಿಡ್–19 ಪ್ರಕರಣಗಳು ಬಹಳ ಕಡಿಮೆ ಪ್ರಮಾಣದಲ್ಲಿ ಪತ್ತೆ

ಆಗಿರುವುದು, ಕಡಿಮೆ ರೋಗಿಗಳ ದಾಖಲಾತಿ, ಹಾಗೂ ಕಡಿಮೆ ಸಾವಿನ ಲೆಕ್ಕಕ್ಕೆ ದಾರಿ ಮಾಡಿಕೊಟ್ಟಂತಹ ಕಳಪೆ ಆರೋಗ್ಯ ಮೂಲಭೂತಸೌಕರ್ಯದ ವ್ಯವಸ್ಥೆಯೂ ಇದಕ್ಕೆ ಕಾರಣವಾಗಿರಬಹುದು.

## ಪಿಎಐ 2021ರ ಕುರಿತು ಸಂಕ್ಷಿಪ್ತ ಸಾರಾಂಶ

ಕಳೆದ ವರ್ಷ, ಅಂದರೆ 2020–2021ನೇ ವರ್ಷದಲ್ಲಿ ರಾಜ್ಯಗಳು ಆಡಳಿತವನ್ನು ಹೇಗೆ ನಿರ್ವಹಿಸಿವೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಪಿಐಎ 2021 ಒಂದು ಸಂಯೋಜಿತ ವಿಧಾನವನ್ನು ಅಳವಡಿಸಿದೆ. ಇದು ಕೋವಿಡ್–19 ಸಾಂಕ್ರಾಮಿದಿಂದ ಸೃಷ್ಟಿಯಾದಂತಹ ಅಡ್ಡಿಗಳ ಹಿನ್ನೆಲೆಯಲ್ಲಿಯೂ ನೋಡಲಾಗಿದೆ. ಕೆಲವು ರಾಜ್ಯಗಳು ಏಕೆ ಉತ್ತಮ ಕಾರ್ಯದಕ್ಷತೆಯನ್ನು ಪ್ರದರ್ಶಿಸಿವೆ, ಹಾಗೂ ಕೆಲವು ರಾಜ್ಯಗಳು ಏಕೆ ಕಳಪೆ ಕಾರ್ಯದಕ್ಷತೆ ಪ್ರದರ್ಶಿಸಿವೆ ಎಂದು ಅರ್ಥ ಮಾಡಿಕೊಳ್ಳಲು ಹಾಗೂ ರಾಜ್ಯಗಳ ಕಾರ್ಯದಕ್ಷತೆಗೆ ಯಾವ ಅಂಶಗಳು ಕಾರಣವಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಇದು ಸಾಕ್ಷ್ಯಾಧಾರಿತ ವಿಶ್ಲೇಷಣೆಯನ್ನು ಒದಗಿಸುತ್ತದೆ.

ಜೊತೆಗೆ ಕೇಂದ್ರ ಪ್ರಾಯೋಜಿತ ಯೋಜನೆಗಳ ಪ್ರಮುಖ ಅಂಶಗಳ ಕಡೆ ಇದು ಗಮನ ಸೆಳೆಯುತ್ತದೆ ಹಾಗೂ ಉತ್ತಮ ಕಾರ್ಯದಕ್ಷತೆ ನೀಡಲು ರಾಜ್ಯಗಳು ಗಮನ ನೀಡಬೇಕಾಗಿರುವಂತಹ ಯೋಜನಾ ಅನುಷ್ಠಾನದಲ್ಲಿ ಕಂಡು ಬರುವ ಕೆಲವು ಅಂತರಗಳ ಕಡೆ ಗಮನ ಸೆಳೆಯುತ್ತದೆ.

ಪಿಎಐ 2021ರಿಂದ ಕಂಡು ಬಂದಿರುವ ಕೆಲವು ಪ್ರಮುಖ ಅವಲೋಕನಗಳು ಹೀಗಿವೆ:

1. **ಗುಚ್ಛ ವಿಶ್ಲೇಷಣೆ**

ವಿಶ್ಲೇಷಿತ ದತ್ತಾಂಶ ಹಾಗೂ ಅವಲೋಕನಗಳು ಭಾರತದ ರಾಜ್ಯಗಳನ್ನು ಈ ಕೆಳಗೆ ತಿಳಿಸಿರುವಂತೆ ಮೂರು ಗುಚ್ಛಗಳಲ್ಲಿ ಗುರುತಿಸಿವೆ:


i. ಮೊದಲನೇ ಗುಚ್ಛ (ಕ್ಲಸ್ಟರ್) ದೊಡ್ಡ ರಾಜ್ಯಗಳಾದ ಕೇರಳ, ಹರ್ಯಾಣ, ಪಂಜಾಬ್ ಹಾಗೂ ಸಣ್ಣ ರಾಜ್ಯಗಳಾದಂತಹ ಅರುಣಾಚಲ ಪ್ರದೇಶ, ದೆಹಲಿ, ಗೋವಾ, ಹಿಮಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಜೊರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ ಮತ್ತು ಉತ್ತರಾಖಾಂಡ್ ರಾಜ್ಯಗಳನ್ನು ಒಳಗೊಂಡಿದೆ. ಈ ಕ್ಲಸ್ಟರ್, ಬೆಳವಣಿಗೆ ಸ್ತಂಭ ಚಾಲಿತವಾಗಿರುವಂತೆ ಗೋಚರಿಸುತ್ತದೆ. ಮೇಲೆ ತಿಳಿಸಿರುವ ರಾಜ್ಯಗಳು ಕೃಷಿ ಕ್ಷೇತ್ರದಿಂದ ಹಿಡಿದು ಕೃಷಿಯೇತರ ಕ್ಷೇತ್ರಗಳವರೆಗೆ ರಚನಾತ್ಮಕ ಪರಿವರ್ತನೆಯ ವಿಷಯಗಳಲ್ಲಿ ಉತ್ತಮ ಕಾರ್ಯದಕ್ಷತೆಯನ್ನು ಪ್ರದರ್ಶಿಸಿವೆ. ಜೊತೆಗೆ ಆರೋಗ್ಯ ಹಾಗೂ ಶಿಕ್ಷಣ ಪರಿಣಾಮಗಳಲ್ಲಿಯೂ ಉತ್ತಮ ಕಾರ್ಯದಕ್ಷತೆಯನ್ನು ಪ್ರದರ್ಶಿಸಿವೆ.

ii. ಎರಡನೇ ಕ್ಲಸ್ಟರ್ ಒಂಬತ್ತು ದೊಡ್ಡ ರಾಜ್ಯಗಳಾದ ಆಂಧ್ರ ಪ್ರದೇಶ, ಛತ್ತೀಸ್‌ಘಡ, ಗುಜರಾತ್, ಕರ್ನಾಟಕ, ಮಧ್ಯ ಪ್ರದೇಶ, ಮಹಾರಾಷ್ಟ್ರ, ರಾಜಸ್ತಾನ, ತಮಿಳುನಾಡು ಮತ್ತು ತೆಲಂಗಾಣಗಳನ್ನು ಒಳಗೊಂಡಿದೆ. ಈ ಕ್ಲಸ್ಟರ್ ಸುಸ್ಥಿರತೆಯ ಸ್ತಂಭದಲ್ಲಿನ ತನ್ನ ಕಾರ್ಯಪ್ರದರ್ಶನದಿಂದ ಚಾಲಿತಗೊಂಡಿದೆ. ಈ ರಾಜ್ಯಗಳು ಉತ್ಪತ್ತಿಯಾಗುವಂತಹ ಘನ ತ್ಯಾಜ್ಯ ನಿರ್ವಹಣೆ, ಕಡಿಮೆ ಪಿಎಂ10 ಮಟ್ಟಗಳ ನಿರ್ವಹಣೆಯಲ್ಲಿ ಕೊಡುಗೆ ನೀಡಿರುವಂತಹ ಸ್ವಚ್ಛ ಅಡುಗೆ ಎಣ್ಣೆ ಬಳಸುವ ಕುಟುಂಬಗಳ ಹೆಚ್ಚಿನ ಶೇಕಡವಾರು ಪ್ರಮಾಣದ ವಿಷಯಗಳಲ್ಲಿ ಸುಧಾರಿತ ಕಾರ್ಯದಕ್ಷತೆಯನ್ನು ಪ್ರದರ್ಶಿಸಿವೆ.

**iii.** ಮೂರನೇ ಕ್ಲಸ್ಟರ್ ಅಸ್ಸಾಂ, ಬಿಹಾರ, ಜಾರ್ಖಂಡ್, ಒರಿಸ್ಸಾ, ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳನ್ನು ಒಳಗೊಂಡಿದೆ. ಬೆಳವಣಿಗೆಯ ಸ್ತಂಭದಲ್ಲಿ ಮಧ್ಯಮ ಕಾರ್ಯದಕ್ಷತೆ ಹಾಗೂ ನ್ಯಾಯೋಚಿತ ಮತ್ತು ಸುಸ್ಥಿರತೆಯ ಸ್ತಂಭಗಳಲ್ಲಿ ಕಳಪೆ ಕಾರ್ಯದಕ್ಷತೆ ಈ ಕ್ಲಸ್ಟರ್‌ನ ಗುಣಲಕ್ಷಣವಾಗಿದೆ. ಈ ರಾಜ್ಯಗಳು ನೈರ್ಮಲ್ಯ, ಕುಡಿಯುವ ನೀರು, ಸ್ವಚ್ಛ ಅಡುಗೆ ಎಣ್ಣೆ, ಇತ್ಯಾದಿಯಂತಹ ಮೂಲಭೂತಸೌಕರ್ಯಗಳನ್ನು ಒದಗಿಸುವ ವಿಷಯದಲ್ಲಿ ಹೋರಾಟ ನಡೆಸುತ್ತಿರುವುದು ಗೋಚರಿಸುತ್ತದೆ. ಉತ್ತರಪ್ರದೇಶ ಹಾಗೂ ಬಿಹಾರ ರಾಜ್ಯಗಳು ಮಹಿಳೆಯರು ಹಾಗೂ ಅಲ್ಪಸಂಖ್ಯಾತರ ವಿರುದ್ಧದ ಅಪರಾಧಗಳ ಪ್ರಮಾಣದಲ್ಲಿ ಕಳಪೆ ಕಾರ್ಯದಕ್ಷತೆಯನ್ನು ಪ್ರದರ್ಶಿಸಿದ್ದು, ಅತೀ ಹೆಚ್ಚಿನ ಸಂಖ್ಯೆಯ ವರದಕ್ಷಿಣೆ ಸಾವುಗಳು ಹಾಗೂ

ಮಾನಭಂಗಗಳು ವರದಿಯಾಗಿವೆ (ಎನ್‌ಸಿಆರ್‌ಬಿ, 2019). ನೀತಿ ಆಯೋಗ ಗುರುತಿಸಿರುವ ಒಟ್ಟು ಶೇ.50.8%ರಷ್ಟು ಪ್ರಮಾಣದಲ್ಲಿರುವ 112 ಮಹತ್ವಾಕಾಂಕ್ಷಿ ಜಿಲ್ಲೆಗಳ ಪೈಕಿ 57 ಜಿಲ್ಲೆಗಳು, ಈ ಕ್ಲಸ್ಟರ್‌ನಡಿ ಬರುವ ಆರು ರಾಜ್ಯಗಳ ಜೊತೆಯಲ್ಲಿ ಗುರುತಿಸಿಕೊಂಡಿವೆ, ಅಂದರೆ ಈ ಕ್ಲಸ್ಟರ್ ಅನ್ನು ಕಳಪೆ ಕಾರ್ಯದಕ್ಷತೆ ಇರುವ ಕ್ಲಸ್ಟರ್ ಎಂದು ಸೂಚಿಸಬಹುದಾಗಿದೆ.

ಉಲ್ಲೇಖಕ್ಕಾಗಿ ಈ ಕೆಳಗೆ ನೀಡಿರುವ ಕ್ಲಸ್ಟರ್ ನಕ್ಷೆಯನ್ನು ನೀಡಲಾಗಿದೆ




(ಸಂಯೋಜಿತ ಕ್ಲಸ್ಟರ್ ನಕ್ಷೆ)

2. **ನ್ಯಾಯೋಚಿತ ಅಥವಾ ಸಮಾನತೆ**

i. ನ್ಯಾಯೋಚಿತ (ಸಮಾನತೆ) ಸ್ತಂಭದಲ್ಲಿ ಗುಜರಾತ್ ದೊಡ್ಡ ರಾಜ್ಯಗಳ ವರ್ಗದಲ್ಲಿ ಮೊದಲ ಸ್ಥಾನವನ್ನು ಹೊಂದಿದ್ದರೆ, ಸಣ್ಣ ರಾಜ್ಯಗಳ ಪಟ್ಟಿಯಲ್ಲಿ ಸಿಕ್ಕಿಂ ಮೊದಲ ಸ್ಥಾನದಲ್ಲಿದೆ ಹಾಗೂ ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳ ವರ್ಗದಲ್ಲಿ ಮೊದಲ ಸ್ಥಾನದಲ್ಲಿದೆ.

ii. ದೊಡ್ಡ ರಾಜ್ಯಗಳ ವರ್ಗದಡಿ ಉತ್ತರ ಪ್ರದೇಶ ಕೆಳಗಿನ ಸ್ಥಾನವನ್ನು ಪಡೆದುಕೊಂಡಿದ್ದು, ಅರುಣಾಚಲ ಪ್ರದೇಶ ಸಣ್ಣ ರಾಜ್ಯಗಳ ವರ್ಗದಲ್ಲಿ ಕೊನೆಯ ಸ್ಥಾನದಲ್ಲಿದೆ ಹಾಗೂ ದಾದ್ರ ಹಾಗೂ ನಾಗರ್ ಹವೇಲಿ ಮತ್ತು ದಮನ್ ಮತ್ತು ದಿಯು ಕೇಂದ್ರಾಡಳಿತ ಪ್ರದೇಶಗಳ ವರ್ಗದಡಿ ಕೊನೆಯ ಸ್ಥಾನದಲ್ಲಿ ಗುರುತಿಸಿಕೊಂಡಿವೆ.

iii. ರಾಜ್ಯಗಳ ಒಟ್ಟಾರೆ ಕಾರ್ಯದಕ್ಷತೆ ದೊಡ್ಡ ಪ್ರಮಾಣದಲ್ಲಿ ನ್ಯಾಯೋಚಿತ ಸ್ತಂಭದಿಂದ ಚಾಲಿತಗೊಂಡಿದೆ.

iv. ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಇತ್ಯಾದಿ ರಾಜ್ಯಗಳು ಕೋವಿಡ್ ಸಾಂಕ್ರಾಮಿಕದ ಮೊದಲನೇ ಅಲೆಯಿಂದ ಅತೀ ಹೆಚ್ಚಿನ ಪ್ರಮಾಣದ ಪರಿಣಾಮವನ್ನು ಎದುರಿಸಿವೆ. (ವರದಿಯಲ್ಲಿ ವಿವರಿಸಲಾಗಿದೆ)

3. **ಬೆಳವಣಿಗೆ**

i. ಶ್ರೇಯಾಂಕಗಳ ವಿಷಯಕ್ಕೆ ಬಂದರೆ ಬೆಳವಣಿಗೆಯ ಸ್ತಂಭದಲ್ಲಿ ಈ ವರ್ಷ ಹೊಸ ಸ್ಪರ್ಧೆಗಳು ಅಚ್ಚರಿ ಮೂಡಿಸಿವೆ.

ii. ಬೆಳವಣಿಗೆ ಸ್ತಂಭದಡಿ, ದೊಡ್ಡ ರಾಜ್ಯಗಳ ವರ್ಗದಲ್ಲಿ ತೆಲಂಗಾಣ ಮೊದಲ ಸ್ಥಾನದಲ್ಲಿ ಗುರುತಿಸಿಕೊಂಡಿದ್ದರೆ, ಸಣ್ಣ ರಾಜ್ಯಗಳ ವರ್ಗದಡಿ ಗೋವಾ ಮೊದಲ ಸ್ಥಾನದಲ್ಲಿ ಗುರುತಿಸಿಕೊಂಡಿದೆ, ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳ ವರ್ಗದಡಿ ಮೊದಲ ಸ್ಥಾನದಲ್ಲಿ ಗುರುತಿಸಿಕೊಂಡಿದೆ.

iii. ದೊಡ್ಡ ರಾಜ್ಯಗಳ ವರ್ಗದಲ್ಲಿ ಬಿಹಾರ ಕೆಳಗಿನ ಸ್ಥಾನದಲ್ಲಿದ್ದರೆ, ಮೇಘಾಲಯ ಸಣ್ಣ ರಾಜ್ಯಗಳ ವರ್ಗದಡಿ ಕೆಳಗಿನ ಸ್ಥಾನದಲ್ಲಿ ಗುರುತಿಸಿಕೊಂಡಿದೆ, ಹಾಗೂ ಕೇಂದ್ರಾಡಳಿತ ಪ್ರದೇಶಗಳ ವರ್ಗದಡಿ ಅಂಡಮಾನ್ ಹಾಗೂ ನಿಕೊಬಾರ್ ದ್ವೀಪಗಳು ಕೆಳಗಿನ ಸ್ಥಾನದಲ್ಲಿವೆ.

iv. ಆಶ್ಚರ್ಯಕರವಾಗಿ ಜಾರ್ಖಂಡ್ ಮೊದಲ ಮೂರನೇ ಸ್ಥಾನದಲ್ಲಿ ಗುರುತಿಸಿಕೊಂಡಿದೆ.

v. ದೊಡ್ಡ ರಾಜ್ಯಗಳ ವರ್ಗದಡಿ ಬೆಳವಣಿಗೆ ಸ್ತಂಭದ ಕಾರ್ಯದಕ್ಷತೆ ಒಟ್ಟಾರೆ ಸೂಚ್ಯಂಕದ ಕಾರ್ಯದಕ್ಷತೆಗೆ ಮಹತ್ತರವಾದ ಕೊಡುಗೆಯನ್ನು ನೀಡಿರುವುದು ಕಂಡು ಬರುತ್ತದೆ.

vi. ಸಣ್ಣ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ವರ್ಗದಡಿ ಬೆಳವಣಿಗೆಯ ಸ್ತಂಭ, ಒಟ್ಟಾರೆ ಸೂಚ್ಯಂಕದ ಕಾರ್ಯದಕ್ಷತೆಗೆ ನೀಡಿರುವ ಕೊಡುಗೆ ಮಧ್ಯಮವಾಗಿದೆ.

vii. ಸಾಂಕ್ರಾಮಿಕದ ಅತೀ ಹೆಚ್ಚಿನ ಪರಿಣಾಮವನ್ನು ಎದುರಿಸುತ್ತಿರುವ ರಾಜ್ಯಗಳಲ್ಲಿ ಬೆಳವಣಿಗೆ ಕಾರ್ಯದಕ್ಷತೆ ತತ್ತರಿಸಿದೆ.

4. **ಸುಸ್ಥಿರತೆ**

i. ಸುಸ್ಥಿರತೆ ಸ್ತಂಭದಲ್ಲಿ, ದೊಡ್ಡ ರಾಜ್ಯಗಳ ವರ್ಗದಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದರೆ, ಸಣ್ಣ ರಾಜ್ಯಗಳ ವರ್ಗದಡಿ ಮಿಜೊರಾಮ್ ಮೊದಲ ಸ್ಥಾನದಲ್ಲಿದೆ ಹಾಗೂ ಕೇಂದ್ರಾಡಳಿತ ಪ್ರದೇಶಗಳ ವರ್ಗದಲ್ಲಿ ಪುದುಚೇರಿ ಮೊದಲ ಸ್ಥಾನದಲ್ಲಿದೆ.

ii. ದೊಡ್ಡ ರಾಜ್ಯಗಳ ವರ್ಗದಲ್ಲಿ ಉತ್ತರ ಪ್ರದೇಶ ಕೊನೆಯ ಸ್ಥಾನದಲ್ಲಿದ್ದರೆ, ಸಣ್ಣ ರಾಜ್ಯಗಳ ವರ್ಗದಲ್ಲಿ ದೆಹಲಿ ಕೊನೆಯ ಸ್ಥಾನದಲ್ಲಿ ಗುರುತಿಸಿಕೊಂಡಿದೆ ಮತ್ತು ಕೇಂದ್ರಾಡಳಿತ ಪ್ರದೇಶಗಳ ವರ್ಗದಲ್ಲಿ ಲಕ್ಷದ್ವೀಪ ಕೊನೆಯ ಸ್ಥಾನದಲ್ಲಿ ಗುರುತಿಸಿಕೊಂಡಿದೆ.

iii. ಸುಸ್ಥಿರತೆಯ ಸ್ತಂಭ ದೊಡ್ಡ ರಾಜ್ಯಗಳ ಕಾರ್ಯದಕ್ಷತೆಗೆ ಆಧಾರವಾಗಿದೆ. ಆದರೆ, ಸಣ್ಣ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಕಾರ್ಯದಕ್ಷತೆಯ ಮೇಲೆ ಮಧ್ಯಮ ಪರಿಣಾಮಗಳನ್ನು ಬೀರಿದೆ.

5. **ಡೆಲ್ಟಾ ವಿಶ್ಲೇಷಣೆ**

ಡೆಲ್ಟಾ ವಿಶ್ಲೇಷಣೆ ರಾಜ್ಯಗಳ ಪ್ರತಿ ವರ್ಷದ ಕಾರ್ಯದಕ್ಷತೆಯ ಸುಧಾರಣೆಯ ಫಲಿತಾಂಶವನ್ನು ಬಿಂಬಿಸುತ್ತದೆ. ಇದರ ಶ್ರೇಯಾಂಕಗಳು, 12 ಪ್ರಮುಖ ಅಭಿವೃದ್ಧಿ ಸೂಚ್ಯಂಕಗಳಿಗೆ ಸಂಬಂಧಪಟ್ಟಂತೆ ಲಭ್ಯವಿರುವ ಕಳೆದ 5 ರಿಂದ 10 ವರ್ಷಗಳ ದತ್ತಾಂಶದ ಡೆಲ್ಟಾ ಮೌಲ್ಯವನ್ನು ಆಧರಿಸಿದೆ.

i. ಒಟ್ಟಾರೆಯಾಗಿ ದೊಡ್ಡ ರಾಜ್ಯಗಳ ವರ್ಗದಡಿ ಛತ್ತೀಸ್‌ಘಡ ಮೊದಲ ಸ್ಥಾನದಲ್ಲಿ ಗುರುತಿಸಿಕೊಂಡಿದ್ದರೆ, ಉತ್ತರ ಪ್ರದೇಶ ಕೊನೆಯ ಸ್ಥಾನದಲ್ಲಿದೆ. ಸಣ್ಣ ರಾಜ್ಯಗಳ ವರ್ಗದಡಿ ನಾಗಾಲ್ಯಾಂಡ್ ಮೊದಲ ಸ್ಥಾನದಲ್ಲಿದ್ದರೆ ಮೇಘಾಲಯ ಕೊನೆಯ ಸ್ಥಾನದಲ್ಲಿ ಗುರುತಿಸಿಕೊಂಡಿದೆ.

ii. ನ್ಯಾಯಪರತೆ ಅಥವಾ ಸಮಾನತೆಯ ಅಂಶಕ್ಕೆ ಸಂಬಂಧಪಟ್ಟಂತೆ ಛತ್ತೀಸ್‌ಘಡ ಮೊದಲ ಸ್ಥಾನದಲ್ಲಿದ್ದರೆ, ಒರಿಸ್ಸಾ ಹಾಗೂ ತೆಲಂಗಾಣ ರಾಜ್ಯಗಳು ನಂತರದ ಸ್ಥಾನಗಳಲ್ಲಿವೆ, ಜಾರ್ಖಂಡ್, ಅಸ್ಸಾಂ ಹಾಗೂ ಉತ್ತರ ಪ್ರದೇಶ ರಾಜ್ಯಗಳು ದೊಡ್ಡ ರಾಜ್ಯಗಳ ವರ್ಗದಲ್ಲಿ ಕೆಳಗಿನ ಸ್ಥಾನಗಳಲ್ಲಿ ಗುರುತಿಸಿಕೊಂಡಿವೆ.

iii. ಸಣ್ಣ ರಾಜ್ಯಗಳ ವರ್ಗದಲ್ಲಿ ದೆಹಲಿ ಮೊದಲ ಸ್ಥಾನದಲ್ಲಿ ಗುರುತಿಸಿಕೊಂಡಿದ್ದರೆ, ಮಣಿಪುರ ಹಾಗೂ ನಾಗಾಲ್ಯಾಂಡ್ ರಾಜ್ಯಗಳು ನಂತರದ ಸ್ಥಾನದಲ್ಲಿವೆ. ಉತ್ತರಾಖಾಂಡ್, ಹಿಮಾಚಲ ಪ್ರದೇಶ ಹಾಗೂ ಗೋವಾ ರಾಜ್ಯಗಳು ಕೆಳಗಿನ ಸ್ಥಾನಗಳಲ್ಲಿ ಗುರುತಿಸಿಕೊಂಡಿವೆ.

iv. ಬೆಳವಣಿಗೆಯ ಸ್ತಂಭದಲ್ಲಿ, ತೆಲಂಗಾಣ, ಕೇರಳ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳು ಡೆಲ್ಟಾದಲ್ಲಿ ಅತೀ ಹೆಚ್ಚಿನ ಪ್ರಮಾಣದ ಬೆಳವಣಿಗೆಯನ್ನು ತೋರಿಸಿವೆ, ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳು ದೊಡ್ಡ ರಾಜ್ಯಗಳ ವರ್ಗದಲ್ಲಿ ಕೆಳಗಿನ ಸ್ಥಾನಗಳಲ್ಲಿವೆ.

v. ಸಣ್ಣ ರಾಜ್ಯಗಳ ವರ್ಗದಲ್ಲಿ ನಾಗಾಲ್ಯಾಂಡ್‌ನ ನಂತರ ಸಿಕ್ಕಿಂ ಹಾಗೂ ತ್ರಿಪುರಾ ರಾಜ್ಯಗಳು ಡೆಲ್ಟಾದಲ್ಲಿ ಅತೀ ಹೆಚ್ಚಿನ ಬೆಳವಣಿಗೆಯನ್ನು ಸೂಚಿಸಿದ್ದು, ಹಿಮಾಚಲ ಪ್ರದೇಶ, ಉತ್ತರಾಖಾಂಡ್ ಹಾಗೂ ಮೇಘಾಲಯ ರಾಜ್ಯಗಳು ಕೆಳಗಿನ ಸ್ಥಾನಗಳಲ್ಲಿ ಗುರುತಿಸಿಕೊಂಡಿವೆ.

vi. ಸುಸ್ಥಿರತೆಯ ಅಂಶದಲ್ಲಿ ದೊಡ್ಡ ರಾಜ್ಯಗಳಾದ ತಮಿಳುನಾಡು, ಕೇರಳ ಹಾಗೂ ಒರಿಸ್ಸಾ ರಾಜ್ಯಗಳು ಡೆಲ್ಟಾದಲ್ಲಿ ಅತೀ ಹೆಚ್ಚಿನ ಬೆಳವಣಿಗೆಯನ್ನು ತೋರಿಸಿವೆ. ತೆಲಾಂಗಣ, ಅಸ್ಸಾಂ ಹಾಗೂ ಆಂಧ್ರ ಪ್ರದೇಶ ರಾಜ್ಯಗಳ ಡೆಲ್ಟಾ ರ್‍ಯಾಂಕಿಂಗ್‌ಗಳಲ್ಲಿ ಕೆಳಗಿನ ಸ್ಥಾನಗಳಲ್ಲಿ ಗುರುತಿಸಿಕೊಂಡಿವೆ. ಸಣ್ಣ ರಾಜ್ಯಗಳ ವರ್ಗದಲ್ಲಿ ಮಿಜೊರಾಂ, ಹಿಮಾಚಲ ಪ್ರದೇಶ ಹಾಗೂ ತ್ರಿಪುರಾ ರಾಜ್ಯಗಳು ಮೇಲಿನ ಸ್ಥಾನಗಳಲ್ಲಿದ್ದರೆ, ದೆಹಲಿ, ಮೇಘಾಲಯ ಹಾಗೂ ಅರುಣಾಚಲ ಪ್ರದೇಶ ರಾಜ್ಯಗಳು ಕೆಳಗಿನ ಸ್ಥಾನಗಳಲ್ಲಿವೆ.

vii. ಒರಿಸ್ಸಾ ಹಾಗೂ ನಾಗಾಲ್ಯಾಂಡ್ ರಾಜ್ಯಗಳು 12 ಪ್ರಮುಖ ಅಭಿವೃದ್ಧಿ ಸೂಚ್ಯಂಕಗಳಡಿ ಅತ್ಯುತ್ತಮ ವಾರ್ಷಿಕ ಸುಧಾರಣೆಯನ್ನು ತೋರಿಸಿವೆ.

6. **ಯೋಜನಾ ವಿಶ್ಲೇಷಣೆ**

ಐಸಿಡಿಎಸ್ ಅನ್ನು ಹೊರತುಪಡಿಸಿದಂತೆ ಯೋಜನಾ ವಿಶ್ಲೇಷಣೆಯು ಎನ್‌ಹೆಚ್‌ಎಂ ಹಾಗೂ ಎಂಡಿಎಂಎಸ್‌ನ ವಿಷಯಗಳಲ್ಲಿ ಕಳೆದ ನಾಲ್ಕು ವರ್ಷಗಳ ದತ್ತಾಂಶ ಹಾಗೂ ಎಂಜಿಎನ್‌ಆರ್‌ಇಜಿಎಸ್ ಮತ್ತು ಎಸ್‌ಎಂಎಸ್‌ಎ ವಿಷಯಗಳಲ್ಲಿ ಕಳೆದ ಐದು ವರ್ಷಗಳ ದತ್ತಾಂಶವನ್ನು ಬಳಸಿಕೊಂಡಿರುವ ಸಮಯ–ಸರಣಿಯನ್ನು ಅಳವಡಿಸಿಕೊಂಡಿದೆ.

- **ಎನ್‌ಹೆಚ್‌ಎಂ**
  - 60:40 ಅನುಪಾತದ ರಾಜ್ಯಗಳಲ್ಲಿ ಕೇರಳ, ಗೋವಾ ಹಾಗೂ ತಮಿಳುನಾಡು ಮೊದಲ ಮೂರು ಅತ್ಯುತ್ತಮ ಕಾರ್ಯದಕ್ಷತೆ ಪ್ರದರ್ಶಿಸಿರುವ ರಾಜ್ಯಗಳಾಗಿದ್ದರೆ, ಉತ್ತರ ಪ್ರದೇಶ, ಜಾರ್ಖಂಡ್ ಹಾಗೂ ಬಿಹಾರ ರಾಜ್ಯಗಳು ಮೂರು ಕೆಳಮಟ್ಟದ ಕಾರ್ಯದಕ್ಷತೆ ಪ್ರದರ್ಶಿಸಿರುವ ರಾಜ್ಯಗಳಾಗಿ ಗುರುತಿಸಿಕೊಂಡಿವೆ.

- 90:10 ಅನುಪಾತದ ರಾಜ್ಯಗಳಲ್ಲಿ ಹಿಮಾಚಲ ಪ್ರದೇಶ, ಸಿಕ್ಕಿಂ ಹಾಗೂ ಮಿಜೊರಾಂ ರಾಜ್ಯಗಳು ಮೊದಲ ಮೂರು ಅತ್ಯುತ್ತಮ ಕಾರ್ಯದಕ್ಷತೆಯನ್ನು ಪ್ರದರ್ಶಿಸಿರುವ ರಾಜ್ಯಗಳೆಂದು ಗುರುತಿಸಿಕೊಂಡಿದ್ದರೆ, ಮಣಿಪುರ, ಅಸ್ಸಾಂ ಹಾಗೂ ಮೇಘಾಲಯ ರಾಜ್ಯಗಳು ಕೆಳಗಿನ ಸ್ಥಾನಗಳಲ್ಲಿ ಗುರುತಿಸಿಕೊಂಡಿವೆ.

- **ಐಸಿಡಿಎಸ್**
  - 60:40 ಅನುಪಾತದ ರಾಜ್ಯಗಳಲ್ಲಿ, ಒರಿಸ್ಸಾ, ಛತ್ತೀಸಘಡ ಹಾಗೂ ಮಧ್ಯ ಪ್ರದೇಶ ರಾಜ್ಯಗಳು ಅತ್ಯುತ್ತಮ ಕಾರ್ಯದಕ್ಷತೆ ನೀಡಿರುವ ಮೊದಲ ಮೂರು ರಾಜ್ಯಗಳೆಂದು ಗುರುತಿಸಿಕೊಂಡಿದ್ದರೆ, ತಮಿಳುನಾಡು, ತೆಲಂಗಾಣ ಹಾಗೂ ದೆಹಲಿ ರಾಜ್ಯಗಳು ಕೆಳಗಿನ ಮೂರು ಸ್ಥಾನಗಳಲ್ಲಿ ಗುರುತಿಸಿಕೊಂಡಿರುವ ರಾಜ್ಯಗಳಾಗಿವೆ.
  - 90:10 ಅನುಪಾತದ ರಾಜ್ಯಗಳಲ್ಲಿ ಮಣಿಪುರ, ಅರುಣಾಚಲ ಪ್ರದೇಶ ಹಾಗೂ ನಾಗಾಲ್ಯಾಂಡ್ ರಾಜ್ಯಗಳು ಮೊದಲ ಮೂರು ಅತ್ಯುತ್ತಮ ಸ್ಥಾನಗಳಲ್ಲಿ ಗುರುತಿಸಿಕೊಂಡಿದ್ದರೆ, ಜಮ್ಮು ಮತ್ತು ಕಾಶ್ಮೀರ, ಉತ್ತರಾಖಾಂಡ್ ಹಾಗೂ ಹಿಮಾಚಲ ಪ್ರದೇಶ ರಾಜ್ಯಗಳು ಕೆಳಗಿನ ಮೂರು ಸ್ಥಾನಗಳಲ್ಲಿ ಗುರುತಿಸಿಕೊಂಡಿವೆ.
- **ಎಂಡಿಎಂಎಸ್**
  - 60:40 ಅನುಪಾತದ ರಾಜ್ಯಗಳಲ್ಲಿ, ಗೋವಾ, ಪಶ್ಚಿಮ ಬಂಗಾಳ ಹಾಗೂ ದೆಹಲಿ ಮೊದಲ ಮೂರು ಅತ್ಯುತ್ತಮ ಪ್ರದರ್ಶನ ರಾಜ್ಯಗಳೆಂದು ಗುರುತಿಸಿಕೊಂಡಿದ್ದರೆ, ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ಬಿಹಾರ ರಾಜ್ಯಗಳು ಕೆಳಗಿನ ಮೂರು ಸ್ಥಾನಗಳನ್ನು ಹಂಚಿಕೊಂಡಿವೆ.
  - 90:10 ಅನುಪಾತದ ರಾಜ್ಯಗಳಲ್ಲಿ, ಮಿಜೊರಾಂ, ಹಿಮಾಚಲ ಪ್ರದೇಶ ಹಾಗೂ ತ್ರಿಪುರ ರಾಜ್ಯಗಳು ಮೊದಲ ಮೂರು ಸ್ಥಾನಗಳನ್ನು ಹಂಚಿಕೊಂಡಿದ್ದರೆ ಹಾಗೂ ಜಮ್ಮು ಮತ್ತು ಕಾಶ್ಮೀರ, ನಾಗಾಲ್ಯಾಂಡ್ ಹಾಗೂ ಅರುಣಾಚಲ ಪ್ರದೇಶ ಕೆಳಗಿನ ಮೂರು ಸ್ಥಾನಗಳನ್ನು ಹಂಚಿಕೊಂಡಿವೆ.
- **ಎಸ್‌ಎಂಎಸ್‌ಎ**
  - 60:40 ಅನುಪಾತದ ರಾಜ್ಯಗಳ ವರ್ಗದಡಿ ಪಶ್ಚಿಮ ಬಂಗಾಳ, ಬಿಹಾರ ಹಾಗೂ ತಮಿಳುನಾಡು ಮೊದಲ ಮೂರು ಸ್ಥಾನಗಳಲ್ಲಿದ್ದರೆ, ಹರ್ಯಾಣ, ಪಂಜಾಬ್ ಮತ್ತು ರಾಜಸ್ತಾನ ಕೆಳಗಿನ ಮೂರು ಸ್ಥಾನಗಳಲ್ಲಿ ಗುರುತಿಸಿಕೊಂಡಿದೆ.
  - 90:10 ಅನುಪಾತದ ರಾಜ್ಯಗಳಲ್ಲಿ ಮಿಜೊರಾಂ, ಅಸ್ಸಾಂ ಹಾಗೂ ತ್ರಿಪುರಾ ರಾಜ್ಯಗಳು ಮೊದಲ ಮೂರು ಅತ್ಯುತ್ತಮ ಕಾರ್ಯಪ್ರದರ್ಶನ ಹೊಂದಿದ್ದರೆ, ನಾಗಾಲ್ಯಾಂಡ್, ಜಮ್ಮು ಮತ್ತು ಕಾಶ್ಮೀರ ಹಾಗೂ ಉತ್ತರಾಖಾಂಡ್ ರಾಜ್ಯಗಳು ಕೆಳಗಿನ ಸ್ಥಾನಗಳಲ್ಲಿ ಗುರುತಿಸಿಕೊಂಡಿವೆ.
- **ಎಂಜಿಎನ್‌ಆರ್‌ಇಜಿಎಸ್**
  - 60:40 ಅನುಪಾತದ ರಾಜ್ಯಗಳಲ್ಲಿ ಕೇರಳ, ಆಂಧ್ರ ಪ್ರದೇಶ ಹಾಗೂ ಒರಿಸ್ಸಾ ಮೊದಲ ಮೂರು ಸ್ಥಾನಗಳಲ್ಲಿದ್ದರೆ, ಮಧ್ಯ ಪ್ರದೇಶ, ಜಾರ್ಖಂಡ್ ಹಾಗೂ ಗೋವಾ ರಾಜ್ಯಗಳು ಕೆಳಗಿನ ಮೂರು ಸ್ಥಾನಗಳಲ್ಲಿವೆ.
  - 90:10 ಅನುಪಾತದ ರಾಜ್ಯಗಳಲ್ಲಿ ಮಿಜೊರಾಂ, ಸಿಕ್ಕಿಂ ಹಾಗೂ ನಾಗಾಲ್ಯಾಂಡ್ ರಾಜ್ಯಗಳು ಮೊದಲ ಮೂರು ಸ್ಥಾನಗಳನ್ನು ಹಂಚಿಕೊಂಡರೆ, ಮಣಿಪುರ ಹಾಗೂ ಅಸ್ಸಾಂ ಕೆಳಗಿನ ಸ್ಥಾನಗಳಲ್ಲಿ ಗುರುತಿಸಿಕೊಂಡಿವೆ.

7. **ಕೋವಿಡ್–19 ಪ್ರತಿಕ್ರಿಯಾ ಸೂಚ್ಯಂಕ**

ಕೋವಿಡ್–19 ಪ್ರತಿಕ್ರಿಯಾ ಸೂಚ್ಯಂಕ, ಮಾರ್ಚ್ 31, 2021ರವರೆಗೆ ದೇಶದಲ್ಲಿ ಮೊದಲ ಕೋವಿಡ್ ಸಾಂಕ್ರಾಮಿಕದ ಪ್ರಕರಣ ಪತ್ತೆಯಾದಾಗಿನಿಂದ ಸಾಂಕ್ರಾಮಿಕದ ನಿರ್ವಹಣೆಯಲ್ಲಿ ಭಾರತದ ರಾಜ್ಯಗಳ ಶ್ರೇಯಾಂಕವನ್ನು ನೀಡುವ ಪ್ರಯತ್ನವಾಗಿದೆ. ಈ ಸೂಚ್ಯಂಕ ಎರಡು ವಿಷಯಗಳನ್ನು ಆಧರಿಸಿದೆ – ಸಿದ್ಧತೆ ಹಾಗೂ ಕಂಟೇನ್‌ಮೆಂಟ್

- ಮೊದಲ ಐದು ಸ್ಥಾನಗಳ ಪೈಕಿ ನಾಲ್ಕು ಸ್ಥಾನಗಳನ್ನು ದಕ್ಷಿಣದ ರಾಜ್ಯಗಳು ಆಕ್ರಮಿಸಿವೆ. ಕೇರಳ, ತಮಿಳುನಾಡು ಹಾಗೂ ಆಂಧ್ರ ಪ್ರದೇಶ ರಾಜ್ಯಗಳು ಎರಡೂ ಸ್ತಂಭಗಳಾದ್ಯಂತ ಸ್ಥಿರವಾದ ಕಾರ್ಯದಕ್ಷತೆಯೊಂದಿಗೆ ಮೊದಲ 3 ಸ್ಥಾನಗಳಲ್ಲಿ ಗುರುತಿಸಿಕೊಂಡರೆ, ಕರ್ನಾಟಕ ಸಿದ್ಧತೆಯ ವಿಷಯಕ್ಕೆ ಸಂಬಂಧಿಸಿದ ಕಾರ್ಯದಕ್ಷತೆಯಲ್ಲಿ ಮಧ್ಯಮ ಪ್ರದರ್ಶನದೊಂದಿಗೆ 5ನೇ ಸ್ಥಾನದಲ್ಲಿದೆ.
- ಕೋವಿಡ್–19 ಪ್ರತಿಕ್ರಿಯಾ ಸೂಚ್ಯಂಕದಲ್ಲಿ ಗಮನಿಸಲಾಗಿರುವ ಸಾಕ್ಷ್ಯಾಧಾರಿತ ಪ್ರವೃತ್ತಿ ಏನೆಂದರೆ ಪೂರಕವಾಗಿ ಕಳಪೆ ಆರ್ಥಿಕ ಹಾಗೂ ಹಣಕಾಸಿನ ಸ್ಥಿತಿಗತಿಗಳನ್ನು ಹೊಂದಿರುವ ರಾಜ್ಯಗಳ ರ್‍ಯಾಂಕಿಂಗ್. ಈ ರಾಜ್ಯಗಳು ಅತಿ ಕಡಿಮೆ ತಲಾವಾರು ಜಿಎಸ್‌ಡಿಪಿ ಹೊಂದಿರುವ ರಾಜ್ಯಗಳಾಗಿವೆ ಅವುಗಳೆಂದರೆ ಬಿಹಾರ, ಜಾರ್ಖಂಡ್, ಉತ್ತರ ಪ್ರದೇಶ ಹಾಗೂ ಮಧ್ಯ ಪ್ರದೇಶ.
- ಆಡಳಿತ ಸೂಚ್ಯಂಕದಲ್ಲಿ 2ನೇ ಶ್ರೇಯಾಂಕದಲ್ಲಿ ಗುರುತಿಸಿಕೊಂಡಿರುವ ಗೋವಾ, ಕೋವಿಡ್–19 ಪ್ರತಿಕ್ರಿಯಾ ಸೂಚ್ಯಂಕದಲ್ಲಿ ಕೊನೆಯ ಸ್ಥಾನಲ್ಲಿದೆ. ಇದಕ್ಕೆ ವಿರುದ್ಧವಾಗಿ ದೆಹಲಿ ಸಿದ್ಧತೆಯ ಅಂಶದಲ್ಲಿ ಬಲಿಷ್ಠ ಕಾರ್ಯದಕ್ಷತೆಯಿಂದಾಗಿ ಅತ್ಯುತ್ತಮ ಪ್ರದರ್ಶನ ನೀಡಿರುವ ರಾಜ್ಯವಾಗಿದ್ದರೆ, ಕಂಟೇನ್‌ಮೆಂಟ್ ಪ್ರಯತ್ನಗಳಿಂದಾಗಿ 11 ಸಣ್ಣ ರಾಜ್ಯಗಳ ಪೈಕಿ 10ನೇ ಶ್ರೇಯಾಂಕವನ್ನು ಪಡೆದುಕೊಂಡಿದೆ.

ಸಂಪರ್ಕಿಸಿ:

ಡಾ. ಅನ್ನಪೂರ್ಣ ರವಿಚಂದರ್ – ಮುಖ್ಯಸ್ಥೆ, ನೀತಿ ಪಾಲ್ಗೊಳ್ಳುವಿಕೆ ಹಾಗೂ ಸಂವಹನೆ, ಪಿಎಸಿ
ಮೊಬೈಲ್–9880844862

ಇಮೇಲ್: annapoorna@pacindia.org